ಓ ಎಸ್ ನಂ. :25/2020

ಪಿಡಬ್ಲ್ಯೂಃ 1

ಸಾಕ್ಷಿಯನ್ನು ದಿಃ 01-06-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟಿ ಸವಾಲುಃ 3, 5 ರಿಂದ 10, 17 ರಿಂದ 21 ಮತ್ತು 23 ನೇ ಪ್ರತಿವಾದಿ ಪರಃ ಶ್ರೀ ಎ.ಹೆಚ್.ಬಿ. ವಕೀಲರಿಂದಃ**

ದಾವಾ ಸ್ವತ್ತಿನಲ್ಲಿ ಒಂದು ಕಟ್ಟಡ ಇದ್ದು, ಅದನ್ನು ಯುಸೂಫ್ ಖಾನ್ ರವರು ನಿರ್ಮಿಸಿರುತ್ತಾರೆ ಎಂದರೆ ಸರಿ. ಸದ್ರಿ ಸ್ವತ್ತಿನಲ್ಲಿ ನನಗೆ ಹಾಗೂ 1 ರಿಂದ 24 ಪ್ರತಿವಾದಿಗಳಿಗೆ ಹಕ್ಕು ಇದೆ ಎಂದರೆ ಸರಿ. ಜುಲೆಖಾಬಿ ರವರು ಮೃತಪಡುವ ಸಮಯದವರೆಗೆ 24 ನೇ ಪ್ರತಿವಾದಿಯ ಆಶ್ರಯದಲ್ಲಿಯೇ ಇದ್ದರು ಎಂದರೆ ಸರಿ. ಜುಲೆಖಾಬಿ ರವರ ದೇಖಾರೇಖಿಯನ್ನು 24 ನೇ ಪ್ರತಿವಾದಿಯೇ ಮಾಡುತ್ತಿದ್ದರು ಎಂದರೆ ಸರಿ. 24 ನೇ ಪ್ರತಿವಾದಿಯು ಜುಲೆಖಾಬಿರವರನ್ನು ಆರೈಕೆ ಮಾಡಿಕೊಂಡು ಬಂದ ಕಾರಣ ತಮ್ಮ ಹಿಸ್ಸೆಯ ಸ್ವತ್ತನ್ನು ಮುಸ್ಲಿಮತಪದ್ಧತಿಯ ರೀತಿಯ 24 ನೇ ಪ್ರತಿವಾದಿಗೆ ದಾನ ಮಾಡಿರುತ್ತಾ ರೆ ಎಂದರೆ ಸರಿ. 5 ನೇ ಪ್ರತಿವಾದಿಯು ದಿಃ 23-05-2021 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಅನಾವಶ್ಯಕವಾಗಿ 25 ನೇ ಪ್ರತಿವಾದಿಯನ್ನು ದಾವೆಯಲ್ಲಿ ಸೇರ್ಪಡೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮುನಾವರ ಖಾನ್ ರವರು 25 ನೇ ಪ್ರತಿವಾದಿ ಸ್ವತ್ತನ್ನು ಮಾರಾಟ ಮಾಡಿದ ವಿಷಯ ಕುಟುಂಬದ ಎಲ್ಲ ಸದಸ್ಯರಿಗೆ ತಿಳಿದಿತ್ತು ಎಂದರೆ ಸರಿಯಲ್ಲ. 25 ನೇ ಪ್ರತಿವಾದಿಗೆ ಮಾರಾಟ ಮಾಡಿದ ಸ್ವತ್ತಿನಿಂದ ಬಂದ ಹಣವನ್ನು ಕುಟುಂಬದ ಅವಶ್ಯಕತೆಗಳಿಗೆ ವಿನಿಯೋಗ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ 25 ನೇ ಪ್ರತಿವಾದಿ ಪರಃ ಶ್ರೀ ಜಿ.ಸಿ.ಎನ್ ವಕೀಲರಿಂದಃ</u>**

(ಶ್ರೀ ಜಿ.ಸಿ.ಎನ್ ವಕೀಲರು ಸಮಯ ಕೋರಿದ್ದು, ಪಾಟೀ ಸವಾಲು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಕುಮಟಾ